# <u>ಕೃಷಿ ಮಾರಾಟ ಇಲಾಖೆ</u>

ಕರ್ನಾಟಕದಲ್ಲಿ 151 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಹಾಗೂ 350 ಉಪ ಮಾರುಕಟ್ಟೆಗಳು ಮತ್ತು ಅಂದಾಜು 800 ಗ್ರಾಮೀಣ ಮಾರುಕಟ್ಟೆಗಳು ಕೃಷಿ ಉತ್ಪನ್ನಗಳ ಸಗಟು ಮಾರಾಟ ವ್ಯವಹಾರದಲ್ಲಿ ನಿರತವಾಗಿವೆ. ಪ್ರತಿ ವರ್ಷ ಸುಮಾರು 19,000 ಕೋಟಿಗಳಷ್ಟು ವಹಿವಾಟು ಈ ಮಾರುಕಟ್ಟೆ ಸಮಿತಿಗಳಲ್ಲಿ ಜರುಗುತ್ತಿದೆ. ಕೃಷಿ ಮಾರಾಟ ಇಲಾಖೆ ಮೂಲತ: ಸಹಕಾರ ಇಲಾಖೆಯ ಭಾಗವಾಗಿದ್ದು, 1972 ರಿಂದ ಸ್ವತಂತ್ರ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಕೇಂದ್ರ ಕಛೇರಿ ಬೆಂಗಳೂರಿನಲ್ಲಿ ಐ.ಎ.ಎಸ್. ವೃಂದದ ಅಧಿಕಾರಿ ಇಲಾಖೆಯ ಆಯುಕ್ತರಿದ್ದು. ಹೆಚ್ಚುವರಿ ನಿರ್ದೇಶಕರು, (ಆಡಳಿತ) ಜಂಟಿ ನಿರ್ದೇಶಕರು (ಯೋಜನೆ) ಜಂಟಿ ನಿರ್ದೇಶಕರು (ಆಡಳಿತ) ಮುಖ್ಯ ಲೆಕ್ಕ ಪರಿಶೋಧಕರು, ಹೆಚ್ಚುವರಿ ನಿರ್ದೇಶಕರು, (ಕಾನೂನು ಜಾರಿಕೋಶ) ಜಂಟಿ ನಿರ್ದೇಶಕರು (ಕಾನೂನು ಜಾರಿಕೋಶ ದಕ್ಷಿಣ ವಲಯ) ಹಾಗೂ ಪ್ರತಿ ಜಿಲ್ಲೆಯಲ್ಲಿ ಉಪ / ಸಹಾಯಕ ನಿರ್ದೇಶಕರು ಕೆಲಸ ನಿರ್ವಹಿಸುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಜಂಟಿ ನಿರ್ದೇಶಕರು, ಕಾನೂನು ಜಾರಿಕೋಶ, ಹೊಸಪೇಟೆಯಲ್ಲಿ ಉಪ ನಿರ್ದೇಶಕರು, ಕಾನೂನು ಜಾರಿಕೋಶ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಕೃಷಿ ಮಾರಾಟ ಇಲಾಖೆಯಲ್ಲಿ ತಾಂತ್ರಿಕ ಕೋಶ, ಲೆಕ್ಕ ಪರಿಶೋಧನಾ ಕೋಶಗಳ ಇತರ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಉಗಮದ ಬಗ್ಗೆ ಹೇಳುವುದಾದರೆ ಸ್ವತಂತ್ರ ಪೂರ್ವದಲ್ಲಿ ಕೃಷಿ ಉತ್ಪನ್ನಗಳ ಮಾರಾಟದಲ್ಲಿ ರೈತರಿಗಾಗುತ್ತಿರುವ ಅನ್ಯಾಯ, ಮೋಸ, ವಂಚನೆಗಳನ್ನು ತಡೆಯುವ ಉದ್ದೇಶದಿಂದ ಆಗಿನ ಬ್ರಿಟೀಷ್ ಸರ್ಕಾರ 1926ರಲ್ಲಿ ರಾಯಲ್ ಕಮೀಶನ್ ಎಂಬ ಆಯೋಗ ನೇಮಿಸಿತು. ಈ ಆಯೋಗ ದೇಶದಲ್ಲಿ ಪ್ರವಾಸ ಮಾಡಿ ಕೃಷಿ ಹುಟ್ಟುವಳಿಗಳ ಮಾರಾಟದಲ್ಲಿ ರೈತರಿಗಾಗುತ್ತಿರುವ ಶೋಷಣೆ ತಡೆಯುವ ಉದ್ದೇಶದಿಂದ ರೈತರದೇ ಪ್ರಾತಿನಿದ್ಯ ಹೊಂದಿದ ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆಗೆ ಶಿಫಾರಸ್ಸು ಮಾಡಿ ವರದಿ ನೀಡಿತು. ಅದರಂತೆ 1936 ರಲ್ಲಿ ಉತ್ತರ ಕರ್ನಾಟಕದ ಬೈಲುಹೊಂಗಲದಲ್ಲಿ ಪ್ರಪ್ರಥಮವಾಗಿ ಮಾರುಕಟ್ಟೆ ಸಮಿತಿ ಸ್ಥಾಪನೆಯಾಯಿತು ಅಂದಿನಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಳೆದ 75 ವರ್ಷಗಳಿಂದ ರೈತರ ಸೇವೆಯಲ್ಲಿ ತೊಡಗಿಸಿಕೊಂಡಿವೆ

1956 ರಲ್ಲಿ ಭಾಷ ತಳಹದಿ ಮೇಲೆ ರಾಜ್ಯಗಳ ಪುನರ್ ರಚನೆಯಾಗಿ ಮೈಸೂರು ರಾಜ್ಯ ಉದಯವಾದಾಗ ಕೃಷಿ ಮಾರುಕಟ್ಟೆಗಳ ವ್ಯವಹಾರಕ್ಕೆ ಸಂಬಂಧಿಸಿದ ಐದು ಶಾಸನಗಳು ರಾಜ್ಯದ ವಿವಿಧ ಭಾಗಗಳಲ್ಲಿ ಜಾರಿಯಲ್ಲಿದ್ದವು ಇವುಗಳನ್ನೆಲ್ಲ ರದ್ದು ಪಡಿಸಿ ಎಕರೂಪ ಶಾಸನವಾದ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಶಾಸನ 66 ನ್ನು ದಿನಾಂಕ:01-05-1968 ರಿಂದ ರಾಜ್ಯದಾದ್ಯಂತ ಜಾರಿಗೆ ತರಲಾಗಿದೇ. ಕೃಷಿ ಮಾರಾಟ ಇಲಾಖೆಯು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಶಾಸನ 66 ಮತ್ತು ನಿಯಮಗಳು 68, ಕೃಷಿ ಉತ್ಪನ್ನ (ವರ್ಗಿಕರಣ ಹಾಗೂ ಗುರತುಹಾಕವ) ಶಾಸನ 1937 ಹಾಗೂ ಲೈಸನ್ಸ್ ನೀಡಿಕೆ ಸಂಬಂದಿಸಿದಂತೆ ಕರ್ನಾಟಕ ರಾಜ್ಯ ಉಗ್ರಾಣ ಶಾಸನ 1961 ಮತ್ತು ನಿಯಮಗಳು 69ನ್ನು ಜಾರಿಗೊಳಿಸುತ್ತಿದೇ.

## <u>ಸಮಿತಿಗಳ ರಚನೆ</u>

ತಾಲೂಕಿಗೆ ಒಂದರಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ರಚನೆಯಾಗುತ್ತದೆ. ಪ್ರತಿ ಮಾರುಕಟ್ಟೆಯ ಸಮಿತಿಯ ಆಡಳಿತವನ್ನು ಪ್ರಜಾಸತ್ತಾತ್ಮಕವಾಗಿ ನಿರ್ವಹಿಸಬೇಕೆಂಬ ದೃಷ್ಟಿಯಿಂದ ಚುನಾಯಿತ ಪ್ರತಿನಿಧಿಗಳಿಗೆ ಶಾಸನದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಒಟ್ಟು 18 ಜನ ಸದಸ್ಯರಿರುತ್ತಾರೆ. ಅದರಲ್ಲಿ 11 ಜನ ರೈತಪ್ರತಿನಿಧಿಗಳಿರುತ್ತಾರೆ. ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗುವ ಅಧಿಕಾರವನ್ನು ಕೇವಲ ರೈತ ಪ್ರತಿನಿಧಿಗಳಿಗೆ ಮಾತ್ರ ಮೀಸಲಿರಿಸಲಾಗಿದೆ. 11 ಜನ ರೈತ ಪ್ರತಿನಿಧಿಗಳಲ್ಲಿ ಒಂದೂಸ್ಥಾನವನ್ನು ರೈತ ಮಹಿಳೆಯರಿಗೆ ಕಾಯ್ದರಿಸಲಾಗಿದೆ. ಒಬ್ಬರು ಅನುಸೂಚಿತ ಜಾತಿಗೆ

ಸೇರಿದವರಾಗಿರುತ್ತಾರೆ. ಒಬ್ಬರು ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಇಬ್ಬರು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರುತ್ತಾರೆ, ಅದರಲ್ಲಿ ಒಬ್ಬರು 'ಎ' ಪ್ರವರ್ಗಕ್ಕೆ ಸೇರಿದವರಾಗಿರುತ್ತಾರೆ. ಮತ್ತು ಇನ್ನೊಬ್ಬರು 'ಬಿ' ಪ್ರವರ್ಗಕ್ಕೆ ಸೇರಿದವರಾಗಿರುತ್ತಾರೆ. ವರ್ತಕರ ಕ್ಷೇತ್ರದಿಂದ ಒಬ್ಬರು ಪ್ರತಿನಿಧಿ ಇರುತ್ತಾರೆ. ತಾಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘದ ಒಬ್ಬರು ಪ್ರತಿನಿಧಿ ಇರುತ್ತಾರೆ. ತಾಲೂಕ ಕೃಷಿ ಉತ್ಪನ್ನ ಸಹಕಾರ ಸಂಸ್ಕರಣ ಸಂಘದ ಒಬ್ಬರು ಪ್ರತಿನಿಧಿ ಇರುತ್ತಾರೆ. ಕೃಷಿ ಮಾರಾಟ ಇಲಾಖೆ ನಿರ್ದೇಶಕರಿಂದ ನೇಮಕಗೊಂಡ ಒಬ್ಬರು ಪ್ರತಿನಿಧಿ ಇರುತ್ತಾರೆ. ಸರಕಾರದಿಂದ ನಾಮಕರಣಗೊಂಡ ಮೂವರು ಪ್ರತಿನಿಧಿಗಳು ಇರುತ್ತಾರೆ. ಮಾರುಕಟ್ಟೆ ಪ್ರದೇಶದಲ್ಲಿನ ಕೃಷಿಕರು 11. ಜನ ಸಮಿತಿ ಸದಸ್ಯರನ್ನು ಚುನಾಯಿಸುತ್ತಾರೆ. ಚುನಾಯಿತ ಸಮಿತಿಯ ಅವಧಿ 5 ವರ್ಷಗಳಾಗಿರುತ್ತದೆ. ಚುನಾಯಿತ ಸಮಿತಿಯು ಪ್ರತಿ ಮಾಹೆ ಸಭೆ ನಡೆಸಿ ಮಾರುಕಟ್ಟೆ ಪ್ರಾಂಗಣದ ಅಭಿವೃದ್ದಿಗೆ ಮತ್ತು ಉತ್ಪನ್ನಗಳ ವ್ಯವಸ್ಥಿತ ಮಾರಾಟಕ್ಕೆ ಅಗತ್ಯವಾದ ಕ್ರಮಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತದೆ.

**ಸಮಿತಿಗಳ ಆದಾಯ:**

ಸಮಿತಿಗಳು ಮಾರುಕಟ್ಟೆ ಪ್ರಾಂಗಣಗಳಲ್ಲಿ ನಡೆಯುವ ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿನ ಮೌಲ್ಯದ ಮೇಲೆ ಶೇ 1.5ರಂತೆ ಮಾರುಕಟ್ಟೆ ಶುಲ್ಕ ಸಂಗ್ರಹಿಸುತ್ತದೆ.

## ಸಮಿತಿಗಳ ಉದ್ದೇಶಗಳು

ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆ ಪ್ರಾಂಗಣಕ್ಕೆ ತಂದಾಗ, ಉತ್ಪನ್ನಗಳಿಗೆ ನ್ಯಾಯವಾದ ತೂಕವನ್ನು ಒದಗಿಸುವುದು, ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆಯುವಂತೆ ಟೆಂಡರ್ ಅಥವಾ ಬಹಿರಂಗ ಹರಾಜು ಮೂಲಕ ಉತ್ಪನ್ನಗಳು ಮಾರಾಟವಾಗುವಂತೆ ವ್ಯವಸ್ಥೆ ಮಾಡುವುದು, ಮಾರುಕಟ್ಟೆ ರಿವಾಜುಗಳನ್ನು ನಿಗಧಿಗೊಳಿಸಿ ಅನುಷ್ಠಾನಗೊಳಿಸುವುದು, ಕೃಷಿ ಉತ್ಪನ್ನಗಳು ಮಾರಾಟವಾದ ತಕ್ಷಣ ರೈತರಿಗೆ ಸಂಪೂರ್ಣ ಹಣ ಪಾವತಿಯಾಗುವಂತೆ ನೋಡಿಕೊಳ್ಳುವುದು ಸಮಿತಿಗಳ ಮುಖ್ಯ ಉದ್ದೇಶಗಳಾಗಿರುತ್ತವೆ.

ಇದಲ್ಲದೆ ಸಮಿತಿಗಳು ಮಾರುಕಟ್ಟೆ ಪ್ರಾಂಗಣಗಳಲ್ಲಿ ಮೂಲಭೂತ ಸೌಕರ್ಯಗಳಾದ ಹರಾಜು ಕಟ್ಟೆಗಳು ಗೋದಾಮುಗಳು, ಆಂತರಿಕ ರಸ್ತೆಗಳು, ವಿದ್ಯುತ್ ಸೌಲಭ್ಯ, ಕುಡಿಯುವ ನೀರಿನ ವ್ಯವಸ್ಥೆ, ಉಪಹಾರ ಗೃಹ, ರೈತಭವನ, ಬ್ಯಾಂಕ್, ಪೋಸ್ಟ್ ಆಫೀಸ್, ಶೌಚಾಲಯ ವ್ಯವಸ್ಥೆ, ಹಮಾಲರ ಶ್ರಮಿಕ ಭವನ, ರೈತ ಮಾಹಿತಿ ಕೇಂದ್ರಗಳು ಮೊದಲಾದ ಸೌಲಭ್ಯಗಳನ್ನು ಒದಗಿಸುರುತ್ತವೆ.

**ಇಲಾಖೆಯ ಯೋಜನೆಗಳು:**

1) ಅಡಮಾನ ಸಾಲ ಯೋಜನೆ– ಈ ಯೋಜನೆಯು ಮಾರುಕಟ್ಟೆ ಸಮಿತಿಗಳಲ್ಲಿ 1994–95ನೇ ಸಾಲಿನಿಂದ ಜಾರಿಯಲ್ಲಿರುತ್ತದೆ ಅಡಮಾನ ಸಾಲ ಯೋಜನೆಯಡಿಯಲ್ಲಿ ಕೃಷಿ ಉತ್ಪನ್ನಗಳ ಬೆಲೆ ಕುಸಿದಾಗ ರೈತರು ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆ ಸಮಿತಿಗಳ ಗೋದಾಮುಗಳಲ್ಲಿ ಅಥವಾ ರಾಜ್ಯ/ ಕೇಂದ್ರ ಉಗ್ರಾಣ ನಿಗಮದ ಗೋದಾಮುಗಳಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ಅಡವಿಟ್ಟು 180 ದಿನಗಳ ಅವಧಿಗೆ ಗರಿಷ್ಟ ರೂ.2,00,000/–ಗಳ ವರೆಗೆ ಅಥವಾ ಉತ್ಪನ್ನಗಳ ಒಟ್ಟು ಮೊತ್ತದ ಶೇ.60ರಷ್ಟು ಹಣವನ್ನು ಸಾಲದ ರೂಪದಲ್ಲಿ ಪಡೆಯಬಹುದಾಗಿದೆ. ಮೊದಲ 90 ದಿನಗಳಲ್ಲಿ ಈ ಹಣಕ್ಕೆ ಯಾವುದೇ ಬಡ್ಡಿ ವಿಧಿಸಲಾಗಿವುದಿಲ್ಲ. 90 ದಿನಗಳ ನಂತರ ಶೇ.4 ರಿಂದ 10ರ ವರೆಗೆ ಬಡ್ಡಿಯನ್ನು ವಿಧಿಸಲಾಗುವುದು.

**ಅವರ್ತ ನಿಧಿ:**

ರಾಜ್ಯ ಸರ್ಕಾರದ ಫ್ಲೋರ್ ಪ್ರೆಸ್ ಯೋಜನೆ ಹಾಗೂ ಭಾರತ ಸರ್ಕಾರದ ಬೆಂಬಲ ಬೆಲೆ ಯೋಜನೆಯನ್ನು ಅನುಷ್ಠಾನ ಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ಅವರ್ತ ನಿಧಿಯನ್ನು ಸ್ಥಾಪಿಸಿದೆ, ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳ ಬೆಲೆಗಳು ಕುಸಿತಗೊಂಡಾಗ ರಾಜ್ಯ ಸರ್ಕಾರ ನಿರ್ಧರಿಸಿದ ಅನುಸಾರ ಮಾರುಕಟ್ಟೆ ಮಧ್ಯ ಪ್ರವೇಶಿಸಿ ರೈತರಿಂದ ಉತ್ಪನ್ನಗಳನ್ನು ಬೆಂಬಲ ಬೆಲೆಗೆ ಖರೀದಿಲಾಗುತ್ತದೆ. ಈ

ಯೋಜನೆಯನ್ನು ತೋಟಕಾರಿಕೆ ಉತ್ಪನ್ನಗಳನ್ನು ಇಡಿ ದೇಶದಲ್ಲಿ ಜಾರಿಗೆತಂದ ಮೊಟ್ಟ ಮೊದಲ ರಾಜ್ಯ ಕರ್ನಾಟಕ ಭಾರತ ಸರ್ಕಾರ ಕನಿಷ್ಠ ಬೆಂಬಲ ಯೋಜನೆಯಡಿಯಲ್ಲಿ ಈರುಳ್ಳಿ, ಆಲೂಗಡ್ಡೆ, ಟೋಮ್ಯಾಟೊ ಇಂತಹ ಶೀಘ್ರವಾಗಿ ನಶಿಸಿ ಹೊಗುವ ತೋಟಗಾರಿಕೆ ಬೆಳೆಗಳಿಗೆ ಬೆಂಬಲ ಬೆಲಗಳನ್ನು ಘೋಶಿಸಿರುವುದಿಲ್ಲ. ಆದರೆ ಈ ಕೆಲಸವನ್ನು ಕರ್ನಾಟಕ ಸರ್ಕಾರ ಮಾಡಿ ಇಡಿ ಭಾರತ ದೇಶಕ್ಕೆ ಮಾದರಿಯಾಗಿದೆ.

<u>ರೈತ ಸಂಜೀವಿನಿ:</u>

ರೈತರಿಗೆ ಸಮಾಜಿಕ ಭದ್ರತೆ ಒದಗಿಸಲು ಅನುಕೂಲವಾಗುವಂತೆ 1996 ರಿಂದ "ರೈತ ಸಂಜೀವಿನಿ" ಕಲ್ಯಾಣ ಯೋಜನೆಯನ್ನು ಮಂಡಳಿಯು ಜಾರಿಗೆ ತಂದಿದೆ. ಕೃಷಿ ಹಾಗೂ ಕೃಷಿ ಮಾರಾಟ ಚಟುವಟಿಕೆಗಳಲ್ಲಿ ತೊಡಗಿದ್ದಾಗ ರೈತರು ಅನಿರೀಕ್ಷತ ಅಪಘಾತಗಳಿಂದ ಅಂಗವಿಕಲರಾದರೆ ಅಥವಾ ಸಾವನ್ನಪ್ಪಿದರೆ ರೂ.50,000–00ಗಳ ವರೆಗೆ ಪರಿಹಾರವನ್ನು ಮಂಡಳಿಯಿಂದ ನೀಡಲಾಗುತ್ತದೆ.

<u>ಜನಶ್ರೀ ವಿಮಾಯೋಜನೆ:</u>

ರಾಜ್ಯದ ಕೃಷಿ ಉತ್ಪನ್ನ ಸಮಿತಿಗಳಲ್ಲಿ ಲೈಸನ್ಸು ಪಡೆದು ಕಾರ್ಯನಿರ್ವಹಿಸುತ್ತಿರುವ ಹಮಾಲರು, ತೂಕದವರು ಮತ್ತು ಚಿಕ್ಕಡಿಯವರಿಗೆ ಭಾರತಿಯ ಜೀವ ವಿಮಾ ನಿಗಮದ ಸಹಯೊಗದೊಂದಿಗೆ ಜನಶ್ರೀ ವಿಮಾ ಯೋಜನೆ ಜಾರಿಗೆತರಲಾಗಿದೆ ಈ ಯೋಜನೆಯಲ್ಲಿ ಸ್ವಾಭಾವಿಕ ಸಾವಿಗೆ, ಅಪಘಾತದಿಂದ ಸಂಬವಿಸಿದ ಸಾವಿಗೆ ಅಥವಾ ಶಾಶ್ವತ ಅಂಗವಿಕಲತಗೆ 30 ರಿಂದ 75 ಸಾವಿರದ ವರೆಗೆ ಪರಿಹಾರಧನ ಜಿವವಿಮಾ ನಿಗಮದಿಂದ ದೊರೆಯುತ್ತದೆ. ಈ ಯೋಜನೆಯಲ್ಲಿ ವಿಮಾ ವ್ಯಾಪ್ತಿಗೆ ಒಳಪಡಿಸಿದ ವ್ಯಕ್ತಿಗಳ ಆರ್ಹ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಕೂಡ ನೀಡಲಾಗುತ್ತದೆ.

<u>ಕೃಷಿ ಮಾರಾಟ ವಾಹಿನಿ:</u>

ರೈತರು ಮತ್ತು ಪೇಟೆ ಕಾರ್ಯಕರ್ತರಿಗೆ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಕನಿಷ್ಠ, ಗರಿಷ್ಟ, ಮತ್ತು ಮಾದರಿ ಬೆಲೆಗಳನ್ನು ಹಾಗೂ ಮುಂತಾದ ವಿವರಗಳನ್ನು ಸದಕಾಲ ಒದಗಿಸುವ ಉದ್ದೇಶದಿಂದ ಕೃಷಿ ಮಾರಾಟ ವಹಿನಿ ವೆಬ್ ಸೈಟ್‌ನ್ನು ಪ್ರಾರಂಭಿಸಲಾಗಿದೆ. ರಾಜ್ಯದ ಎಲ್ಲಾ ಕೃಷಿ ಉತ್ಪನ್ನಗಳ ದೈನದಿಂದ ಆವಕ, ಕನಿಷ್ಠ, ಗರಿಷ್ಠ, ಮಾದರಿ ಬೆಲೆಗಳನ್ನು **http://maratavahini.kar.nic.in** ವೆಬ್ ಸೈಟ್‌ನಲ್ಲಿ ಪಡೆಯಬಹುದು.

<u>ಆಗ್‌ಮಾರ್ಕ್‌ನೆಟ್:ಸ</u>

ದೇಶದ ವಿವಿಧ ರಾಜ್ಯಗಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಪ್ರಚಲಿತದಲ್ಲಿರುವ ಕೃಷಿ ಉತ್ಪನ್ನಗಳ ದೈನಂದಿನ ಬೆಲೆಗಳ ಮಾಹಿತಿಯನ್ನು ಸದಾಕಾಲ (**online**) ರೈತರಿಗೆ ಮತ್ತು ಪೇಟೆಯ ಕಾರ್ಯಕರ್ತರಿಗೆ ಒದಗಿಸುವ ಉದ್ದೇಶದಿಂದ ಭಾರತ ಸರ್ಕಾರ ವ್ಯವಸಾಯೊತ್ಪನ್ನಗಳ ಮಾರಾಟ ಮೇಲ್ವಿಚಾರಣಾ ನಿರ್ದೇಶನಾಲಯ, ಪರೀದಾಬಾದ ಮತ್ತು ನ್ಯಾಷನಲ್ ಇನ್ ಫಾರ್ಮೆಟಿಕ್ ಸೆಂಟರ್ (**National informatic centre (NIC)** ಇವರ ಸಹಯೋಗದೊಂದಿಗೆ ಆಗ್‌ಮಾರ್ಕ್‌ನೆಟ್ (**agmarknet**) ವೆಬ್‌ಸೈಟ್‌ನ್ನು ಪ್ರಾರಂಭಿಸಿಲಾಗಿರುತ್ತದೆ. ಕೃಷಿ ಮಾರಾಟ ವಾಹಿನಿಗು ಆಗ್‌ಮಾರ್ಕ್‌ನೆಟ್ ಗೂ (**agmarknet**) ಸಂಪರ್ಕವನ್ನು ಕಲ್ಪಿಸಲಾಗಿದ್ದು, ಕರ್ನಾಟಕ ರಾಜ್ಯದ ರೈತರು ರಾಜ್ಯದ ಮತ್ತು ಹೊರ ರಾಜ್ಯಗಳ ಮಾರುಕಟ್ಟೆಗಳಲ್ಲಿಯ ಪ್ರಚಲಿತದಲ್ಲಿರುವ ಬೆಲೆಗಳನ್ನು ಸದಾಕಾಲ ಪಡೆಯುವಂತೆ ವ್ಯವಸ್ಥೆ ಮಾಡಲಾಗಿದೆ.

## <u>ಕೃಷಿ ಪೇಟೆ:</u>

ಕೃಷಿ ಮಾರಾಟ ಮಂಡಳಿ ವತಿಯಿಂದ ಕೃಷಿ ಪೇಟೆ ಎನ್ನುವ ಕನ್ನಡ ಮಾಸಿಕ ಪತ್ರಿಕೆಯನ್ನು ಪ್ರಕಟಿಸಲಾಗುತ್ತಿದೆ. ಮಾರುಕಟ್ಟೆ ಸಮಿತಿಗಳ ಕಾರ್ಯ ಚಟುವಟಿಕೆಗಳು, ಇಲಾಖೆಯ ವಿನೂತನ ಕಾರ್ಯಕ್ರಮಗಳು ಹಾಗೂ ಸರ್ಕಾರದ ಕಾರ್ಯ ನೀತಿ ಮುಂತಾದವುಗಳ ಮಾಹಿತಿಯನ್ನು ರೈತರಿಗೆ ತಲಪಿಸುವ ಕಾರ್ಯವನ್ನು ಕೃಷಿ ಪೇಟೆಯು ನಿರ್ವಹಿಸುತ್ತಿದೆ.

## <u>ಅಭಿವೃದ್ಧಿ ಯೋಜನೆಗಳು:</u>

ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ ನಿಧಿ ಅಡಿಯಲ್ಲಿ ಗ್ರಾಮಿಣ ಸಂತೆಗಳ ಅಭಿವೃದ್ಧಿಯನ್ನು ವಿವಿಧ ಮಾರುಕಟ್ಟೆ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗಿದೆ. ಕೇಂದ್ರ ಸರ್ಕಾರದ ಆಸ್ಸೈಡ್ ಯೋಜನೆಯಡಿಯಲ್ಲಿ ಬ್ಯಾಡಗಿ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ. ಕೇಂದ್ರ ಸರ್ಕಾರವು ಟೆಕ್ನಾಲಜಿ ಮಿಶನ್ ಆನ್ ಕಾಟನ್ ಯೋಜನೆಯಡಿಯಲ್ಲಿ ಈ ರಾಜ್ಯದಲ್ಲಿ ಗದಗ್  ಸಂತೇಸರಗೂರು, ಮಹಾಲಿಂಗಪುರ (ಲೋಕಾಪುರ), ಬಿಜಾಪುರ, ರಾಣಿಬೆನ್ನೂರು, ಹುಬ್ಬಳ್ಳಿ, ಸವದತ್ತಿ, ಹಳಿಯಾಳ, ಅಣ್ಣಿಗೇರಿ, ಬೈಲಹೊಂಗಲ, ಚಿತ್ರದುರ್ಗ, ಹಾವೇರಿ, ಕಲಘಟಗಿ ಮಾರುಕಟ್ಟೆಗಳನ್ನು ಅಭಿವೃದ್ದಿಪಡಿಸಲಾಗಿದೆ. ಗ್ರಾಮೀಣ ಭಂಡಾರ ಯೋಜನೆಯಡಿಯಲ್ಲಿ ಶಿವಮೊಗ್ಗ, ಭದ್ರಾವತಿ, ದಾವಣಗೆರ, ಸಿರಗುಪ್ಪ, ಚಿತ್ತದುರ್ಗ, ಗಂಗಾವತಿ, ಮಾರುಕಟ್ಟೆ ಸಮಿತಿಗಳಲ್ಲಿ ಗೋದಾಮುಗಳನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮೂಲ ಉದ್ದೇಶ ರೈತ ಹಿತ ಕಾಪಾಡುವುದು ಕಳೆದ 7 ದಳಕಗಳಿಂದ ರೈತರ  ಸೇವೆಯಲ್ಲಿ ತೊಡಗಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ತಮ್ಮ ಸ್ಥಾಪನೆಯ ಉದ್ದೇಶವನ್ನು ಈಡೇರಿಸುವಲ್ಲಿ ಯಶಸ್ವಿಯಾಗದೇ ಇರುವ ವಿಷಯವನ್ನು ತಿಳಿದು ಭಾರತ ಸರ್ಕಾರ 2001ರಲ್ಲಿ ಶಂಕರಲಾಲ್ ಗುರು ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತು. ಅದರಂತೆ ಸಮಿತಿಯು ಕೃಷಿ ಮಾರಾಟ ಕ್ಷೇತ್ರದ ಇಂದಿನ ಅವಶ್ಯಕತೆಗಳ ಹಿನ್ನಲೆಯಲ್ಲಿ ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಿ ವಿವಿಧ ರಾಜ್ಯಗಳ ಮಾರಾಟ ನಿಯಂತ್ರಣ ಶಾಸನಗಳನ್ನು ತಿದ್ದುಪಡಿ ಮಾಡಲು ಸೂಚಿಸಿತು. ಅದರಂತೆ ಕರ್ನಾಟಕ ಸರ್ಕಾರವು 2007ರಲ್ಲಿ ಮಾರಾಟ ನಿಯಂತ್ರಣ ಶಾಸನಕ್ಕೆ ಸಮಗ್ರ ತಿದ್ದುಪಡಿಯನ್ನು ಮಾಡಿರುತ್ತದೆ ಪ್ರಮುಖವಾದುವೇಂದರೆ.

1) ಖಾಸಗಿ ಕ್ಷೇತ್ರದಲ್ಲಿ ಮಾರುಕಟ್ಟೆಗಳ ಸ್ಥಾಪನೆಗೆ, ರೈತಗ್ರಾಹಕ ಮಾರುಕಟ್ಟೆಗಳ ಸ್ಥಾಪನೆಗೆ ನೇರ ಖರೀದಿ ಕೇಂದ್ರಗಳನ್ನು ತೆರೆಯಲು ಅವಕಾಶ ಮಾಡಿಕೊಡಲಾಗಿದೆ. ಖಾಸಗಿ ಕ್ಷೇತ್ರದಲ್ಲಿ ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದ ಸ್ಥಳೀಯ ವಿನಿಯಯ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ. ಖಾಸಾಗಿ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಲು ಮಾರುಕಟ್ಟೆ ಸಮಿತಿಗಳಿಗೆ  ಸೂಕ್ತ ಸಂದರ್ಭಗಳಲ್ಲಿ ಅವಕಾಶ ಒದಗಿಸಲಾಗಿದೆ.

2) ಗುತ್ತಿಗೆ ಕೃಷಿ ಉತ್ಪಾದಕ ಹಾಗೂ ಗುತ್ತಿಗೆ ಕೃಷಿ ಪ್ರಾಯೋಜಕರ ಮಧ್ಯ ಆಗಿರುವ ಒಪ್ಪಂದವನ್ನು ಸಂಬಂಧಪಟ್ಟ ಮಾರುಕಟ್ಟೆ ಸಮಿತಿಯಲ್ಲಿ ನೊಂದಣಿ ಮಾಡಿಸಲು ಅವಕಾಶ ಕಲ್ಪಿಸುವುದರ ಮೂಲಕ ಗುತ್ತಿಗೆ ಕೃಷಿಯನ್ನು ಶಾಸನದ ವ್ಯಾಪ್ತಿಯಲ್ಲಿ ತರಲಾಗಿದೆ.

3) ಹೊಸದಾಗಿ ಅಥವಾ ನವೀಕರಣಗೊಂಡ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸುವ ಸಂಸ್ಕರಣ ಘಟಕಗಳು ಖರೀದಿಸುವ ಘೋಷಿತ ಕೃಷಿ ಉತ್ಪನ್ನಗಳ ಮೇಲೆ ಸಂದಾಯ ಮಾಡಬೇಕಾಗಿದ್ದ ಮಾರುಕಟ್ಟೆ ಶುಲ್ಕಕ್ಕೆ ಕೆಲವು ಷರತ್ತಿಗೊಳಪಟ್ಟು ರಿಯಾಯಿತಿ ನೀಡಲಾಗಿದೆ.

4) ಆವರ್ತ ನಿಧಿ ರಚನೆ ಹಾಗೂ ವಿನಿಯೋಗದ ಪ್ರಸ್ತಾವನೆಯನ್ನು ಶಾಸನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

## <u>ಕೃಷಿ ಮಾರಾಟ ಇಲಾಖೆಯಲ್ಲಿ ಇತ್ತಿಚಿನ ಬೆಳೆವಣೆಗೆಗಳು.</u>

ಇ–ಟೆಂಡರ್

ಜಾಗತೀಕರಣದ ಹಿನ್ನಲೆಯಲ್ಲಿ ತೀವ್ರ ಗತಿಯಲ್ಲಿ ಸಾಗುತ್ತಿರುವ ಕೆಲಸ ಕಾರ್ಯಗಳ ನಡುವೆ ಕೇವಲ ಮಾನವ ಶ್ರಮವನ್ನು ಉಪಯೋಗಿಸಿಕೊಂಡು ಕೆಲಸ ನಿರ್ವಹಿಸುವುದು ಕಷ್ಟ. ಈ ಹಿನ್ನಲೆಯಲ್ಲಿ ಶೀಘ್ರ ಹಾಗೂ ಪಾರದರ್ಶಕ ರೀತಿಯಲ್ಲಿ ಕೃಷಿ ಉತ್ಪನ್‌ಗಳಿಗೆ ಶೀಘ್ರ ಮಾರಾಟ ವ್ಯವಸ್ಥೆ, ಲಾಭದಾಯಕ ಬೆಲೆ ದೊಕಿಸಿಕೊಡುವ ನಿಟ್ಟಿನಲ್ಲಿ ಇ–ಟೆಂಡರ್ ಪದ್ದತಿಯನ್ನು ರಾಷ್ಟ್ರಿಯ ಕೃಷಿ ವಿಕಾಸ ಯೋಜನೆಯ ನೆರೆವಿದೊಂದಿಗೆ ರಾಜ್ಯದ 45 ಮಾರುಕಟ್ಟೆ ಸಮಿತಿಗಳಲ್ಲಿ ಜಾರಿಗೆ ತರಲಾಗಿದೆ.

## ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್:

ಹೆಚ್ಚು ಸಿಬ್ಬಂದಿಯ ನೆರವಿಲ್ಲದೆ ಸಮಿತಿಗಳ ಆಸ್ತಿ ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ಅಭಿವೃದ್ದಿ ಕಾರ್ಯಗಳು, ಕೃಷಿ ಉತ್ಪನ್ನಗಳ ಸಾಗಣಿಕೆಗೆ ಪರ್ಮಿಟ್ ವಿತರಣೆ ಮುಂತಾದ ಆಡಳತಾತ್ಮಕ ಕಾರ್ಯಗಳನ್ನು ವೇಗವಾಗಿ ನಿರ್ವಹಿಸಲು ಕಿಯೋನಿಕ್ಸ್ ಸಂಸ್ಥೆಯ ಸಹಯೋಗದಿಂದ ರಾಜ್ಯದ 78 ಮಾರುಕಟ್ಟೆ ಸಮಿತಿಗಳಲ್ಲಿ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್ ಅಳವಡಿಸಿಕೊಳ್ಳಲಾಗಿದೆ.

## ಎಸ್.ಎಂ.ಎಸ್ ಉಚಿತ ಸೇವೆ:

ಈ ಯೋಜನೆಯಡಿಯಲ್ಲಿ ರೈತರು ಸಮಿಪದ ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿಗಳಲ್ಲಿ ತಮ್ಮ ಮೋಬೈಲ್ ಸಂಖ್ಯೆಯನ್ನು ನೀಡಿ ನೋಂದಾಯಿಸಿ ಕೊಂಡಲ್ಲಿ ಪ್ರಮುಖ ಕೃಷಿ ಉತ್ಪನ್ನಗಳ ಆಯಾ ದಿನದ ಧಾರಣೆಗಳನ್ನು ಉಚಿತವಾಗಿ ರವಾನಿಸಲಾಗುವುದು.

## ಸ್ಥಳೀಯ ವಿನಿಮಯಕೇಂದ್ರಗಳ ಮೂಲಕ ವ್ಯಾಪಾರ:

ಸ್ಥಳಿಯ ವಿನಮಯಕೇಂದ್ರಗಳನ್ನು ಸ್ಥಾಪಿಸಲು ಶಾಸನದಲ್ಲಿ ಅವಕಾಶ ಕಲ್ಪಿಸಲಾಗಿದೆ ಎನ್.ಸಿ.ಡಿ.ಇ.ಎಕ್ಸ ಎಂ.ಸಿ.ಎಕ್ಸ ಮತ್ತು ರೀಲಯನ್ಸ್ ವಿನಿಮಯ ಕೇಂದ್ರಗಳು ಇಲಾಖೆಯಿಂದ ಅನುಮತಿ ಪಡೆದು ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗಿವೆ. ಕರ್ನಾಟಕ ರಾಜ್ಯದಲ್ಲಿ ಎನ್.ಸಿ.ಡಿ.ಇ.ಎಕ್ಸ ಸಂಸ್ಥೆಯು ತೊಗರಿ ಉತ್ಪನ್ನವನ್ನು ವಿನಿಮಯ ಕೇಂದ್ರದ ಮೂಲಕ ಇ–ಟೆಂಡರ್ ವ್ಯವಸ್ಥೆಯಲ್ಲಿ ಮಾರಾಟ ಮಾಡುವ ವ್ಯವಸ್ಥೆಯನ್ನು ಗುಲ್ಬರ್ಗದಲ್ಲಿ ಪ್ರಾಂಭಿಸಿರುತ್ತಾರೆ

## ರೈತರಿಗೆ ಕಿವಿ ಮಾತು:

- ಬಿಳಿ ಚೀಟಿ ವ್ಯವಹಾರ ತಿರಸ್ಕರಿಸಿ.
- ದಲ್ಲಾಲರ ಮೂಲಕ ಮಾರಾಟ ಮಾಡಿದಾಗ ದಲ್ಲಾಲಿ ಶುಲ್ಕವನ್ನು ಕೊಡಬೇಡಿ.
- ಎಲೆಕ್ಟ್ರಾನಿಕ್ ತೂಕದ ಯಂತ್ರದ ಮೂಲಕವೇ ಉತ್ಪನ್ನಗಳನ್ನು ತೂಕಮಾಡಿಸಿ.
- ಉತ್ಪನ್ನ ಮಾರಾಟವಾದ ದಿನವೇ ಹಣವನ್ನು ಪಡೆಯಿರಿ.
- ಕಾನೂನು ಬಾಹೀರ ಶುಲ್ಕಗಳನ್ನು ದಲ್ಲಾಲಿಯು ಮುರಿದು ಕೊಳ್ಳಲು ಅವಕಾಶ ನೀಡಬೇಡಿ.
- ಮಾರಾಟ ಸಮಸ್ಯಗಳಿಗೆ ಸಮೀಪದ ಮಾರುಕಟ್ಟೆ ಸಮಿತಿಯವರನ್ನು ಸಂಪರ್ಕಿಸಿ.